VIJAYAKUMAR KANNUR

Digitally signed by VIJAYAKUMAR KANNUR
Date: 2026.02.04 10:31:24 +0530

**CC 237/2021**
**ಡಿ.ಡಬ್ಲ್ಯೂ.1**

**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮುಧೋಳ**

| | | |
|---|---|---|
| ಹೆಸರು | : | ಗೋವಿಂದ ದುರ್ಗಪ್ಪ ಕೌಲಗಿ |
| ತಂದೆಯ ಹೆಸರು | : | ದುರ್ಗಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಲೋಕಾಪೂರ |

ಸಾಕ್ಷಿಗೆ ಇಂದು ದಿನಾಂಕ 03.02.2026 ರಂದು ಪ್ರಮಾಣವಚನ ಬೋಧಿಸಲಾಯಿತು.
**ಮುಖ್ಯವಿಚಾರಣೆಃ ಆರೋಪಿಯ ಪರ ಶ್ರೀ ಎಲ್ ಎನ್ ಎಸ್ ವಕೀಲರಿಂದಃ**

ನಾನು 2016 ರಲ್ಲಿ ದೂರದಾರ ಬ್ಯಾಂಕಿನಿಂದ ರೂ. 8 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿರುವೆನು. ಆ ಸಮಯದಲ್ಲಿ ನಾನು 10 ಚೆಕ್ ಗಳನ್ನು ಮತ್ತು ಒಂದು ಬಾಂಡ ಪೇಪರನ್ನು ನೀಡಿರುವೆನು. ನಾನು ಸಾಲ ಪಡೆದುಕೊಂಡಿರುವ ಹಣದಲ್ಲಿ ಮೇ 2019 ರಲ್ಲಿ ರೂ. 2 ಲಕ್ಷ 80 ಸಾವಿರ ಹಣವನ್ನು ಯುನಿಯನ್ ಬ್ಯಾಂಕ್, ಲೋಕಾಪೂರ ಶಾಲೆಯ ಚೆಕ್ ನ್ನು ದೂರುದಾರ ಬ್ಯಾಂಕಿಗೆ ನೀಡಿರುವೆನು. ಅದೇ ರೀತಿ ಜೂನ್ 2019 ರಲ್ಲಿ ರೂ. 2 ಲಕ್ಷ 20 ಸಾವಿರ ಹಣವನ್ನು ಯುನಿಯನ್ ಬ್ಯಾಂಕ್, ಲೋಕಾಪೂರ ಶಾಲೆಯ ಚೆಕ್ ನ್ನು ದೂರುದಾರ ಬ್ಯಾಂಕಿಗೆ ನೀಡಿರುವೆನು. ಆಗಸ್ಟ 2019 ರಲ್ಲಿ ರೂ. 2 ಲಕ್ಷ ಹಣವನ್ನು ಯುನಿಯನ್ ಬ್ಯಾಂಕ್, ಲೋಕಾಪೂರ ಶಾಲೆಯ ಚೆಕ್ ನ್ನು ದೂರುದಾರ ಬ್ಯಾಂಕಿಗೆ ನೀಡಿರುವೆನು. ಸೆಪ್ಟೆಂಬರ 2019 ರಲ್ಲಿ ರೂ. 2 ಲಕ್ಷ ಹಣವನ್ನು ಯುನಿಯನ್ ಬ್ಯಾಂಕ್, ಲೋಕಾಪೂರ ಶಾಲೆಯ ಚೆಕ್ ನ್ನು ದೂರುದಾರ ಬ್ಯಾಂಕಿಗೆ ನೀಡಿರುವೆನು. ಒಟ್ಟು ರೂ. 9 ಲಕ್ಷ ಹಣವನ್ನು ದೂರುದಾರ ಬ್ಯಾಂಕಿಗೆ ನೀಡಿರುವೆನು. ನಾನು ದೂರುದಾರ ಬ್ಯಾಂಕಿಗೆ ಯಾವುದೇ ಸಾಲದ ಬಾಕಿ ಹಣ ನೀಡುವ ಬಾದ್ಯತೆ ಇರುವುದಿಲ್ಲ. ನಾನು ನಿಪಿ 2 ರ ಚೆಕ್ ನ್ನು ದಿಃ 21.01.2020 ರಂದು ನೀಡಿರುವುದಿಲ್ಲ, ಅದನ್ನು ನಾನು ಸಾಲ ಪಡೆದುಕೊಂಡ ಸಮಯದಲ್ಲಿ ಒಟ್ಟು 10 ಚೆಕ್ ಗಳನ್ನು ಭದ್ರತೆಗಾಗಿ ನೀಡಿದ್ದು ಅದರಲ್ಲಿನ ಒಂದು ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರು ದಾಖಲು ಮಾಡಿರುವರು. ಚೆಕ್ ಮೂಲಕ ದೂರುದಾರ ಬ್ಯಾಂಕಿಗೆ ನೀಡಿರುವ ಬ್ಯಾಂಕ್ ಸ್ಟೆಟಮೆಂಟ್ ನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು **ನಿಡಿ 1** ಎಂದು ಗುರುತಿಸಲಾಯಿತು. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ನನ್ನ ವಿನಂತಿ ಇರುವುದು.

<u>ಪಾಟೀ ಸವಾಲುಃ</u> ದೂರುದಾರ ಪರ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿ ಅದೆ.

ಸಾಕ್ಷಿದಾರರ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಮುಧೋಳ.